ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನನಗೆ ಗೊತ್ತಿರುವ ಪ್ರಕಾರ ಈ ಬಿಜಿನೆಸ್ ಅಡ್ವೈಜರಿ ಕಮಿಟಿಯವರು ತಾವು ಬೇಜಾರು ಮಾಡಿಕೊಂಡರೂ ಚಿಂತೆ ಇಲ್ಲ ಬೆಂಗಳೂರಿನಲ್ಲಿ ಕ್ರಿಕೆಟ್ ಆಟ ನಡೆಯುತ್ತಿರುವುದರಿಂದ ರಜ ಕೊಟ್ಟಿದ್ದಾರೆಂದು ತಿಳಿಯಿತು. ಆ ಕಾರಣಕ್ಕಾಗಿ ರಜ ಕೊಟ್ಟಿದ್ದರೆ ನಾನು ಈ ಪ್ರತಿಭಟನೆಯನ್ನು ಮಾಡಿ ಸಭಾತ್ಯಾಗ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ನನ್ನದೂ ಇದಕ್ಕೆ ಬೆಂಬಲ ಇಲ್ಲ. ನನಗೆ ಗೊತ್ತಾಗಲಿಲ್ಲ. ನಾನು ತಡವಾಗಿ ಬಂದೆ. ರಜ ಕೊಡಬಾರದಾಗಿತ್ತು. ಯಾರು ಬೇಕಾದರೂ ಹೋಗಬಹುದಾಗಿತ್ತು, ಬಿಡಬಹುದಾಗಿತ್ತು ಇದು ನಮಗೆ ಬೇಕಾಗಿರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಈ ದಿವಸ ಬಹಳ ಹೆಮ್ಮೆ ಪಡಬೇಕಾದ ವಿಷಯ ಏನೆಂದರೆ ನಮ್ಮ ದೇಶದ ಕ್ರಿಕೆಟ್ ಪಟುಗಳು ಪ್ರಬಲವಾದ ಇಂಗ್ಲೆಂಡ್ ಟೀಮನ್ನು ಮೂರು ಸಾರಿ ಸೋಲಿಸಿ ಸರಣಿಯನ್ನು ಗೆದ್ದುಕೊಂಡಿದ್ದಾರೆ. ಅವರಿಗೆ ಅಭಿನಂದನೆಯನ್ನು ಸಲ್ಲಿಸುವುದು ನಮ್ಮ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ಕೂಡ ಕ್ರಿಕೆಟ್ ಫ್ಯಾನ್‌ಗಳು. ಅವರು ಇಲ್ಲಿಗೆ ಬರುತ್ತಿದ್ದಾರೆ. ಆ ಪಂದ್ಯವನ್ನು ನೋಡಬೇಕೆಂಬ ಆಸೆ ಜನಗಳಿಗೆ ಇದೆ. ನಾವು ಹೆಮ್ಮೆ ಪಡಬೇಕಾದ ವಿಚಾರ ಏನು ಎಂದರೆ ನಮ್ಮ ದೇಶದ ಟೀಮ್ ಸರಣಿಯನ್ನು ಗೆದ್ದಿರುವುದು.....

ಶ್ರೀ ವಾಟಾಳ್ ನಾಗರಾಜ್:– ಈ ಸದನದಲ್ಲಿ ಅಭಿನಂದನೆಯನ್ನು ನಮ್ಮ ಕ್ರಿಕೆಟ್ ಪಟುಗಳಿಗೆ ನಾನು ಸಲ್ಲಿಸುತ್ತೇನೆ. ಅವರ ಬೆನ್ನು ತಟ್ಟೋಣ. ಆದರೆ ಸದನಕ್ಕೆ ರಜ ಕೊಟ್ಟು ಹೋಗಬೇಕಾಗಿರಲಿಲ್ಲ. ಇಂತಹ ಪರಿಸ್ಥಿತಿ ಯಾವ ದೇಶದಲ್ಲೂ ಕಾಣುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಶುಕ್ರವಾರ ನಾವು 9.30 ಗಂಟೆಗೆ ಸೇರಬೇಕಾಗಿತ್ತು. ಹೇಗೋ ಒಂದು ಗಂಟೆಗೆ ಅಡ್ಜರ್ನ್ ಮಾಡಬೇಕಾಗಿತ್ತು. ಶನಿವಾರ ಮತ್ತು ಭಾನುವಾರ ಈ ಸದನಗಳು ನಡೆಯುವುದಿಲ್ಲ. ಹೀಗಾಗಿ ಮೂರು–ನಾಲ್ಕು ಗಂಟೆಯ ಸಲುವಾಗಿ ನಾವು ಸೇರುವುದಕ್ಕೆ ಬದಲು ಈ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಕೆಲವು ಶಾಸಕರು ಅಂದು ಊರಿಗೆ ಹೋಗಬಹುದು. ಕೆಲವು ಶಾಸಕರು ಕ್ರಿಕೆಟ್ ಮ್ಯಾಚ್ ನೋಡಲು ಹೋಗಬಹುದು. ಆ ದಿವಸ ಸದನ ಇದ್ದಿದ್ದರೆ ಸದನ ನಡೆಸುವುದು ಕಷ್ಟವಾಗುತ್ತಿತ್ತು. ಆ ದೃಷ್ಟಿಯಿಂದ ಈ ಒಂದು ನಿರ್ಣಯವನ್ನು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ತೆಗೆದುಕೊಳ್ಳಲಾಗಿದೆ. ಇದರ ಬಗ್ಗೆ ಹೆಚ್ಚಿನ ಚರ್ಚೆಗೆ ಅವಕಾಶ ಇಲ್ಲವೆಂದು ನಾನು ಭಾವಿಸುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾನು ಕ್ರಿಕೆಟ್ ನೋಡುವಂತಹ ಆರಾಮ ವರ್ಗಕ್ಕೆ ಸೇರಿದವನಲ್ಲ. ಆ ಕಾರಣಕ್ಕಾಗಿ ನಾನು ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ಈ ಕಾರಣಕ್ಕಾಗಿ ಏನಾದರೂ ಶುಕ್ರವಾರ ರಜ ಕೊಟ್ಟಿದ್ದರೆ ನಾನು ಅದಕ್ಕೆ ಸಭಾತ್ಯಾಗ ಮಾಡುತ್ತೇನೆ. ನಾನು ಶುಕ್ರವಾರಕ್ಕೆ ಖಾಸಗಿ ಮಸೂದೆಗಳನ್ನು ಕಳುಹಿಸಿದ್ದೇವೆ ಹಾಗೂ ಖಾಸಗೀ ನಿರ್ಣಯಗಳನ್ನು ಕಳುಹಿಸಿದ್ದೇನೆ. ಅವುಗಳಲ್ಲಿ ಕೆಲವು ಬಹಳ ಮುಖ್ಯವಾದ ವಿಷಯಗಳಾಗಿವೆ. ನಮ್ಮ ವಿಷಯವನ್ನು ಮೊಟಕು ಮಾಡುವಂತಹ ಈ ತೀರ್ಮಾನವನ್ನು ಯಾರೇ ತೆಗೆದುಕೊಂಡರು. ನಾನು ಅದನ್ನು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಪ್ರೊ. ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:– ನಾನು ಕ್ರಿಕೆಟ್ ವಿರೋಧಿಯಲ್ಲ. ಆದರೆ ರಜ ಕೊಟ್ಟಿರುವುದು ಸರಿಯಲ್ಲ ಎಂದು ಹೇಳುತ್ತೇನೆ.